ರಾಜು ಯೋಜನೆಗಳು ಹಾಗೂ ೭೫೦ಕ್ಕೆ ಪಂಪು ಜೋಡಿಸಿರುವ ಕೊಳವೆ ಬಾವಿಗಳು ಇವೆ. ಇವುಗಳಿಂದ ಗ್ರಾಮೀಣ ಜನರಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.

ಸರ್ಕಾರಕ್ಕೆ ಜಿಲ್ಲಾಧಿಕಾರಿಗಳು ವರದಿ ಮಾಡಿದ ಪ್ರಕಾರ ಸುಮಾರು ೮೫೦ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗಿದೆ ಎಂದು ತಿಳಿದುಬಂದಿದ್ದು ನೀರಿನ ಅಭಾವ ನೀಗಿಸಲು ಸುಮಾರು ೨ ಕೋಟಿ ಹಣ ಬೇಕಾಗಬಹುದೆಂದು ಜಿಲ್ಲಾಧಿಕಾರಿಗಳು ಅಂದಾಜು ಮಾಡಿದ್ದಾರೆ.

೧೯೯೦-೯೧ರ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ಕೋಲಾರ ಜಿಲ್ಲೆಗೆ ಕುಡಿಯುವ ನೀರಿನ ಯೋಜನೆಗಳಿಗಾಗಿ ರೂ. ೧೪೨.೦೦ ಲಕ್ಷ ಹಣವನ್ನು ಖರ್ಚು ಮಾಡಲು ಉದ್ದೇಶಿಸಲಾಗಿದೆ. ಈ ಯೋಜನೆಗಳನ್ನು ಕಾರ್ಯಗತಗೊಳಿಸುವಾಗ ಕುಡಿಯುವ ನೀರಿನ ಅಭಾವವಿರುವ ಗ್ರಾಮಗಳಿಗೆ ಆದ್ಯತೆಯನ್ನು ಕೊಡಬೇಕೆಂದು ಜಿಲ್ಲಾ ಪರಿಷತ್ತಿಗೆ ಆದೇಶ ಕೊಡಲಾಗುವುದು.

೫. ರಾಜ್ಯದ ಗ್ರಾಮ ಪಂಚಾಯಿತಿ ಮತ್ತು ಮಂಡಲಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಮುಷ್ಕರ ಹೂಡಿರುವುದು

ಶ್ರೀ ಡಿ. ಬಿ ಚಂದ್ರೇಗೌಡ.— ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ರಾಜ್ಯದ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳ ಗಮನ ಸೆಳೆಯುವುದಕ್ಕೆ ನಿಯಮ ೩೫೯ರನ್ವಯ ಒಂದು ನೋಟೀಸ್ ಕೊಟ್ಟಿದ್ದೇನೆ. ನಿನ್ನೆಯಿಂದ ರಾಜ್ಯದ ಸುಮಾರು ೧೫ ಸಾವಿರ ಜನ ಹಿಂದಿನ ಗ್ರಾಮಪಂಚಾಯಿತಿ ಮತ್ತು ಇಂದಿನ ಮಂಡಲಗಳಲ್ಲಿ ಕೆಲಸ ಮಾಡತಕ್ಕ ನೌಕರರು ಕಬ್ಬನ್ ಪಾರ್ಕ್‌ನಲ್ಲಿ ಮುಷ್ಕರ, ಕೂತಿದ್ದಾರೆ. ಅವರಿಗೆ ದಿನಕ್ಕೆ ೧ ರೂ. ನಿಂದ ೫ ರೂ. ವರೆಗೆ ಸಂಬಳ ಇದೆ. ಅಂದರೆ ತಿಂಗಳಿಗೆ ೩೦ ರಿಂದ ೧೫೦ ರೂ.ವರೆಗೆ ಸಂಬಳ ಇದೆ. ಇಡೀ ರಾಜ್ಯದ ನೌಕರರು ಇವತ್ತು ನಗರಕ್ಕೆ ಬಂದಿದ್ದಾರೆ. ಅವರು ಒಂದು ಸಾರಿ ಇಲ್ಲಿಂದ ವಾಪಸ್ಸು ಹೋಗುವುದಕ್ಕೆ ಅವರ ೬ ತಿಂಗಳ ಸಂಬಳ ಖರ್ಚು ಆಗುತ್ತದೆ. ಹಾಗೂ ಇನ್ನು ಒಂದು ದಿನ ಹೆಚ್ಚು ಇಲ್ಲಿ ಉಳಿದರೆ ಅವರ ಒಂದು ವರ್ಷದ ವೇತನ ಖರ್ಚು ಆಗುವುದಿದ್ದು, ಈ ಹಣ ಗಳಿಸಲು ಮತ್ತೆ ಒಂದು ವರ್ಷ ದುಡಿಯಬೇಕಾಗುತ್ತದೆ. ಮುಖ್ಯವಾದ ಅವರ ಬೇಡಿಕೆ ಏಂದರೆ ಅವರನ್ನು ಸರ್ಕಾರಿ ನೌಕರರನ್ನಾಗಿ ಪರಿಗಣಿಸಬೇಕೆಂಬುದು ಇದು ಸಾಧ್ಯ ಆಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ಅವರು ಕಳೆದ ೧೫ ವರ್ಷಗಳಿಂದ ಕೆಲಸ ಮಾಡಿದ್ದಾರೆ. ಅವರು ಇವತ್ತು ನಗರಕ್ಕೆ ಬಂದಿದ್ದಾರೆ. ತಾವು ಏನಾದರೂ ಆಲೋಚನೆ ಮಾಡುತ್ತೇವೆಂದು ಹೇಳಿದರೆ ಅವರು ವಾಪಸ್ಸು ಹೋಗುವುದಕ್ಕೆ ಸಿದ್ಧರಿದ್ದಾರೆ ಆದ್ದರಿಂದ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಸರ್ಕಾರದ ಆರ್ಥಿಕ ಸ್ಥಿತಿಗತಿಗಳನ್ನು ನೋಡಿಕೊಂಡು ಏನಾದರೂ ಪರಿಹಾರ ಒದಗಿಸುವುದಕ್ಕೆ ಸಾಧ್ಯವಿದ್ದರೆ ಒದಗಿಸಿ ನಿಮ್ಮಿಂದ ಇದು ಆಗದಿದ್ದರೆ ಬೇರೆ ಯಾರಿಂದಲೂ ಆಗುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಜನ ಬಹಳ ತೀರಾ ಕೆಳಗೆ ಇದ್ದಾರೆ. ನಮ್ಮ ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಶೋಷಣೆಗೆ ಸಿಕ್ಕಿರುವ ಇವರಿಗೆ ದಿವಸಕ್ಕೆ ೧ ರೂಪಾಯಿ ಕೊಡಲಾಗುತ್ತಿದೆ. ಇವರು ಈಗ ಕಬ್ಬನ್ ಪಾರ್ಕ್‌ನಲ್ಲಿ ಸೇರಿದ್ದಾರೆ. ನಾನು ಹೋಗಿ ನೋಡಿಕೊಂಡು ಬಂದಿದ್ದೇನೆ. ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆಂದು ಹೇಳಿದ್ದೇನೆ. ಹಾಗೂ ತಂದಿದ್ದೇನೆ. ಏನಾದರೂ ಸಾಧ್ಯವಿದ್ದರೆ ತಾವು ಈ ಮೂಲಕ ಆಶ್ವಾಸನೆ ಕೊಡಿ. ಇಲ್ಲದಿದ್ದರೆ ಕಾಲಾವಕಾಶ ತೆಗೆದುಕೊಂಡು ಇವರ ಬಗ್ಗೆ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನವನ್ನು ಮಾಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರಾದ ಚಂದ್ರೇಗೌಡರು ಬಹಳ ಅನುಕಂಪದಿಂದ ಈ ವಿಷಯವನ್ನು ಸದನದ ಮುಂದೆ ತಂದಿದ್ದಾರೆ. ಸರ್ಕಾರ ನಡೆಸುವಾಗ ಅನುಕಂಪದ ಜೊತೆಗೆ ಸತ್ಯಾಂಶಗಳನ್ನೂ ಸಹ ನೋಡಬೇಕಾಗುತ್ತದೆ. ಈಗ ಲೋಕಲ್ ಬಾಡೀಸ್ ಮತ್ತು ಮಂಡಲಪಂಚಾಯಿತಿಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಸರ್ಕಾರಿ ನೌಕರರೆಂದೇನೂ ಪರಿಗಣಿಸಿಲ್ಲ. ಅವರು ಸರ್ಕಾರಿ ನೌಕರರು ಅಲ್ಲವೇ ಅಲ್ಲ. ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಏನು ಹಣವನ್ನು ವಸೂಲಿ ಮಾಡುತ್ತಾರೋ ಅದನ್ನು ನೋಡಿ ಆ ಸೀಮಿತದಲ್ಲಿ ಅವರಿಗೆ ಆಲ್ಲಿ ಸಂಬಳ ಕೊಡುವ ವ್ಯವಸ್ಥೆ ಇದೆ. ನಮಗೂ, ಜಿಲ್ಲಾಪರಿಷತ್ತಿಗೂ, ಮಂಡಲ ಪಂಚಾಯಿತಿಯವರಿಗೂ ಏನೂ ಸಂಬಂಧ ಇಲ್ಲ. ಸರ್ಕಾರಕ್ಕೂ ಅವರಿಗೂ ಏನೂ ಸಂಬಂಧ ಇಲ್ಲ. ಸ್ಥಳೀಯ ಸಂಸ್ಥೆಗಳಲ್ಲಿ ಅವರ ಹಣಕಾಸಿನ ವ್ಯವಸ್ಥೆ ನೋಡಿಕೊಂಡು ಅಲ್ಲಿ ವಸೂಲಿ ಮಾಡುವ ಕಂದಾಯ ನೋಡಿಕೊಂಡು ಅಲ್ಲಿ ಅವರಿಗೆ ಸಂಬಳ ಕೊಡುವ ವ್ಯವಸ್ಥೆ ಇದೆ. ಈಗ ಎಲ್ಲರೂ ಚಳುವಳಿ ಮಾಡುತ್ತಿರುವಾಗ ನಾವೂ ಏಕೆ ಚಳುವಳಿ ಮಾಡಬಾರದೆಂದು ಇವರೂ

ಪ್ರಯತ್ನ ಮಾಡಿದ್ದಾರೆ. ನಾನು ನಮ್ಮ ಪಕ್ಷದಲ್ಲಿರುವ ಸದಸ್ಯರಿಗೆ ದಯಮಾಡಿ ಕೇಳುತ್ತೇನೆ. ನಾವು ಇಂತಹ ವಿಷಯಗಳ ಬಗ್ಗೆ ಪ್ರೋತ್ಸಾಹ ಕೊಟ್ಟರೆ ಸರ್ಕಾರ ಹೇಗೆ ಕೆಲಸ ಮಾಡಬೇಕೆಂಬ ಬಗ್ಗೆ ಕೂಡಾ ಯೋಚನೆ ಮಾಡಬೇಕಾಗುತ್ತದೆ. ನನ್ನ ಅಂದಾಜಿನ ಪ್ರಕಾರ ೧೪ ಸಾವಿರ ಜನರು ಈ ವ್ಯವಸ್ಥೆಯಲ್ಲಿದ್ದಾರೆ. ಮಂಡಲ ಪಂಚಾಯಿತಿ ವ್ಯಾಪ್ತಿಯಲ್ಲಿ ಯಾರು ಯಾರು ತಮಗೆ ಬೇಕೋ ಅಂತಹವರನ್ನು ಅವರವರೇ ಅಪಾಯಿಂಟ್ ಮಾಡಿಕೊಂಡಿದ್ದಾರೆ. ಅವರು ನೇಮಕಾತಿ ನಿಯಮವನ್ನೇನೂ ಅನುಸರಿಸಿಲ್ಲ. ರೆಕ್ರೂಟ್‌ಮೆಂಟ್ ಏನೂ ಅಲ್ಲಿ ಆಗಬೇಕೆಂದೇನಿಲ್ಲ. ಅವರಿಗೆಸರಿಕಾಣುವವರನ್ನು ಮಾಡಿಕೊಳ್ಳಿ ಎಂದು ಹೇಳಿದ್ದೇವೆ. ಹಾಗೆಯೇ ಬಡವರನ್ನು ನೇಮಕ ಮಾಡಿ ಕೊಳ್ಳಿ ಎಂದು ಹೇಳಿದ್ದೇವೆ. ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಅವರು ನಿಯಮಗಳು ಏನು ಇವೆ ಅವುಗಳ ಆಧಾರದ ಮೇಲೆ ನೇಮಕ ಮಾಡಿದ್ದಾರೆ. ಸರ್ಕಾರಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ.—ಸರ್ಕಾರಕ್ಕೂ ಸ್ಥಳೀಯ ಸಂಸ್ಥೆಗಳಿಗೂ ಸಂಬಂಧ ಇದೆ ಅಲ್ಲವೇ? ಸಂಬಂಧ ವಿದ್ದರೂ ಸಹ ಇವತ್ತಿನವರೆಗೆ ಯಾವುದೇ ರಿಕ್ರೂಟ್‌ಮೆಂಟ್ ರೂಲ್ಸ್ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಪ್ರಾರಂಭದಲ್ಲಿ ಯಾರನ್ನು ಮಂಡಲ ಪಂಚಾಯಿತಿಯವರು ಯಾವ ಆಧಾರದ ಮೇಲೆ ನೇಮಿಸಿಕೊಂಡಿದ್ದಾರೆಂದರೆ ಯಾವ ನಿಯಮಾವಳಿಗಳೂ ಇಲ್ಲ. ಅವರದೇ ಆದ ನಿಯಮಾವಳಿಗಳ ಪ್ರಕಾರ ಕೆಲಸಗಳನ್ನು ಮಾಡಿಸಿಕೊಳ್ಳುವುದಕ್ಕೋಸ್ಕರ ನೇಮಿಸಿಕೊಂಡಿದ್ದಾರೆ. ಅವರ ನಿಯಮಾವಳಿ ಪ್ರಕಾರ ಅವರು ಕೆಲಸ ಮಾಡಬೇಕಾಗುತ್ತದೆ. ಸರ್ಕಾರದ ನಿಯಮಾವಳಿಗಳು ಅದಕ್ಕೆ ಅನ್ವಯವಾಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

† ಶ್ರೀ ಪಿ. ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕ ಬಜೆಟನ್ನು ಅನಿವಾರ್ಯವಾಗಿ ವಿರೋಧಿಸಿ ಕೆಲವು ಅಭಿಪ್ರಾಯಗಳನ್ನು ತಮ್ಮ ಮುಖೇನ ಹೇಳುತ್ತಿದ್ದೇನೆ, ನಿನ್ನೆ ಮಾನ್ಯ ವಿರೋಧಪಕ್ಷದ ನಾಯಕರು ವಿರೋಧ ವ್ಯಕ್ತ ಪಡಿಸುತ್ತ ಈ ಸರ್ಕಾರಕ್ಕೆ ಯಾವರೀತಿಯಾಗಿ ಜನರು ಅಧಿಕಾರ ಕೊಟ್ಟಿದ್ದಾರೆ ಅವರು ಏನೊಂದು ಆಸೆಯನ್ನು ಇಟ್ಟಿದ್ದರು ಆ ಜನತೆಗೆ ನಿರಾಶೆ ಮಾಡಿದ್ದಾರೆ ಗ್ರಾಮೀಣಾಭಿವೃದ್ಧಿಗೆ ಹೆಚ್ಚಿಗೆ ಹಣ ಕೊಡದೆ ಬಜೆಟನ್ನು ಮಂಡಿಸಿದ್ದಾರೆ. ನೀರಾವರಿ ಇಲಾಖೆ ಇವತ್ತಿನ ದಿವಸ ಪ್ರಾಮುಖ್ಯವಾದ ಇಲಾಖೆ. ಅದೇರೀತಿಯಾಗಿ ಕೃಷಿ ಇಲಾಖೆಗೆ ಕೂಡ ಅಷ್ಟೇ ಪ್ರಾಮುಖ್ಯತೆಯನ್ನು ಸರ್ಕಾರ ಕೊಟ್ಟು ಹೆಚ್ಚಿನ ಹಣಕಾಸನ್ನು ಬಿಡುಗಡೆ ಮಾಡಿದ್ದರೆ ಅನುಕೂಲವಾಗುತ್ತಿತ್ತು. ಇವತ್ತು ಸಣ್ಣ ನೀರಾವರಿ ಯೋಜನೆಗೆ ಆಗಲಿ ಅಥವಾ ಬೃಹನೀರಾವರಿ ಮುಖಾಂತರ ನೀರನ್ನು ರೈತರಿಗೆ ಸಪ್ಲೈ ಮಾಡುವುದಾಗಲಿ ಬಾಂದಾರುಗಳನ್ನು ಕಟ್ಟುವುದಾಗಲಿ ಮಾಡಿದ್ದರೆ ರೈತರಿಗೆ ಒಳ್ಳೆಯ ಅನುಕೂಲವಾಗುತ್ತಿತ್ತು. ಅದೇ ರೀತಿ ಕೆಲವು ವಿಚಾರಗಳನ್ನು ಹೇಳುತ್ತಾ ರಾಜ್ಯದಲ್ಲಿ ಇವತ್ತು ಅನೇಕ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಗಳಲ್ಲಿ ಹೆಚ್ಚು ಹಣವನ್ನು ತೊಡಗಿಸಲಾಗಿದೆ ನಮ್ಮ ರಾಜ್ಯದಲ್ಲಿ ನೂರಕ್ಕೆ ಎಂಭತ್ತು ಭಾಗ ರೈತರು ಇದ್ದಾರೆ. ರೈತರ ಸೇವೆ ಮಾಡುತ್ತಿದ್ದೇವೆಂದು ಇವತ್ತಿನ ದಿವಸ ಬೆನ್ನು ಚಪ್ಪರಿಸಿಕೊಳ್ಳುತ್ತಿದ್ದಾರೆ, ಅನೇಕ ರೈತರ ಹೊಟ್ಟೆಯ ಮೇಲೆ ಹೊಡೆಯುತಕ್ಕ ಕಾರ್ಯಕ್ರಮಗಳನ್ನು ಈ ಸರ್ಕಾರದವರು ಹಾಕಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಈಗಲೇ ವಿದ್ಯುಚ್ಛಕ್ತಿ ಉತ್ಪಾದನೆ ಕಡಿಮೆ ಇದೆ. ನೀರಾವರಿ ಬಗ್ಗೆ ಕೂಡ ಹೆಚ್ಚಿನ ಗಮನ ಕೊಡಲಿಲ್ಲ. ಈ ಸರ್ಕಾರದವರು ಇದಕ್ಕೆಲ್ಲಾ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗಳ ಬಗ್ಗೆ ಮಾನ್ಯ ಸಚಿವರು ಕೊಟ್ಟಿರತಕ್ಕ ಪಟ್ಟಿಯನ್ನು ನೋಡಿದರೆ ಅದರಲ್ಲಿ ೭೨೦ ಕೋಟಿ ರೂಪಾಯಿಗಳ ಲಾಸ್ ಆಗಿದೆಯೆಂದು ಹೇಳುತ್ತಿದ್ದಾರೆ. ಇದು ಹೇಗಾಯಿತು? ಇದಕ್ಕೆ ಯಾರು ಕಾರಣ? ಈಗಾಗಲೇ ಎಸ್ಟಿಮೇಟ್ ಕಮಿಟಿಯ ವರದಿಯಲ್ಲಿ ಈ ವಿಚಾರ ಬಂದಿದೆ. ಪ್ಲಾನಿಂಗ್ ಕಮಿಟಿ ವರದಿಯಲ್ಲಿ ಬಂದಿದೆ, ಇದರ ಬಗ್ಗೆ ಸರ್ಕಾರ ಯೋಗ್ಯ ನಿರ್ಣಯ ತೆಗೆದು ಕೊಳ್ಳಬೇಕು. ಈಗಾಗಲೇ ನಿರುದ್ಯೋಗಿ ಪದವೀಧರರಂ ಜಾಸ್ತಿ ಇದ್ದಾರೆ. ಸರ್ಕಾರದವರು ರೋಜ್‌ಗಾರ್ ಯೋಜನೆಯಲ್ಲಿ ಕೆಲಸ ಕೊಟ್ಟಿದೆವೆಂದು ಹೇಳಿದ್ದಾರೆ. ಸ್ಕಿಲ್ಡ್ ಲೇಬರರ್ಸ್ ಕೆಲಸ ಕೊಡುತ್ತಿದ್ದಾರೆ. ಆದರ ಬದಲು ಅವರು ಮಾಡತಕ್ಕೆಕೆಲಸವನ್ನು ಕೊಟ್ಟು ಗ್ರಾಮೀಣಾಭಿವೃದ್ಧಿಯ ಬಗ್ಗೆ ಹೆಚ್ಚಿನ ಗಮನಹರಿಸಬೇಕು. ನಿರುದ್ಯೋಗಿ ಪದವೀಧರರಿಗೆ ಕೈಗಾರಿಕೆಗಳಲ್ಲಿ ಅಗಲಿ ಅಥವಾ ಬೇರೆ ಯಾವುದೇ ರೀತಿಯ ಅಗ್ರಿಕಲ್ಚರಲ್ ಇಂಡಸ್ಟ್ರಿಗಳನ್ನು ಪ್ರಾರಂಭ